ದೇವರು ಶೂನ್ಯ ಸ್ವರೂಪನಾಗಿ ಅಲ್ಲೇ ನಿಂತಿದ್ದಾನೆ ಅನ್ನಿಸಿತ್ತು. ಚಪ್ಪಡಿ ಹಾಸಿದ ಪ್ರಾಂಗಣದ ಮೇಲೆಲ್ಲ ಒಣಗಿದ ಪಾಚಿಗಳಿದ್ದವು. ಮುರಿದ, ಭಾರದ ದೀಪದ ಸೊಡರೊಂದು ಈಗಲೂ ತಾನು ದೇವರಿಗೆ ಆರತಿ ಮಾಡುತ್ತಲೇ ಇದ್ದೇನೆ ಎಂಬಂತೆ ಕಲ್ಲು ಮೆಟ್ಟಿಲ ಬಳಿ ನಿಂತುಕೊಂಡಿತ್ತು.

ಭೂತ-ವರ್ತಮಾನಗಳೆರಡೂ ಸಂಧಿಸುವ ಆ ವಿಚಿತ್ರ ಪ್ರಾಂಗಣದ ಕಟ್ಟೆಯ ಮೇಲವನು ಅವಳ ಕೈ ಹಿಡಿದಿದ್ದ. ಅವಳಾದರೂ 'ಇದು ನನಗೆ ಗೊತ್ತಿತ್ತು' ಎಂಬಂತೆ ಅಚ್ಚರಿಗೊಳ್ಳದೇ, ಪ್ರತಿಭಟಿಸದೇ ಸುಮ್ಮನೆ ನಡೆದಿದ್ದಳು. ಅವಳ ಕೈಯ ಮೆದುವಿಗೆ ಅವನಿಗೆ ಅಚ್ಚರಿಯಾಗಿತ್ತು. ದೇವರೂ ಇಲ್ಲದೆ, ಪ್ರಾರ್ಥನೆಯೊಂದೇ ಉಳಿದುಹೋದ ಆ ನಿರ್ಮಾನುಷ ದೇವಾಲಯದ ಹಿನ್ನೆಲೆಯಲ್ಲಿ ಅವನಿಗೆ ಅವಳು ದೇವತೆಯಂತೆ ಕಂಡಿದ್ದಳು. ಅವಳಿಗೆ ದೇವರು ಕಂಡಿದ್ದ. ಒಬ್ಬರನ್ನೊಬ್ಬರು ಏನೋ ಪ್ರಾರ್ಥಿಸಿಕೊಂಡಂತೆ ಕೆಲ ಕ್ಷಣ ಸುಮ್ಮನೆ ನಿಂತ ಅವರಿಬ್ಬರೂ ಅಲ್ಲಿಂದ ತೆರಳಿದ್ದರು.

ಮರಳಿ ಮನೆಗೆ ಬರುವ ಹೊತ್ತಿಗೆ ಇಬ್ಬರಲ್ಲೂ ಮಾತುಗಳಿರಲಿಲ್ಲ. ಯಾವುದೋ ದಿವ್ಯಾನುಭೂತಿಗೆ ಸಂದು ಹೋದವರಂತೆ ಇಬ್ಬರೂ ಮೌನವಾಗಿದ್ದರು. ಜನುಮಜನುಮದಿಂದ ಒಬ್ಬರಿಗೊಬ್ಬರು ಪರಿಚಯವಿರುವವರಂತೆ ಕಣ್ಣಲ್ಲೇ ಮಾತಾಡಿಕೊಳ್ಳುತ್ತಿದ್ದರು. ಸಂಜೆಯ ಲಾಂಚಿಗೆ ಹೊರಟು ನಿಂತವಳ ಹಣೆಗೆ ಕುಂಕುಮ ಹಚ್ಚಿದ ಅಮ್ಮ 'ಹೀಗೇ ಬರ್ತಾ ಇರು' ಎಂದಿದ್ದಳು. ಆ ಮಾತಿನಲ್ಲಿನ 'ಇರು' ಎನ್ನುವ ಬಿನ್ನಹ ತನ್ನದೂ ಹೌದು ಎಂದು ಶ್ರೀಮುಖನಿಗನಿಸಿತ್ತು. ಬೀಸುವ ತಂಗಾಳಿ, ಹಿನ್ನೆಲೆಯಲ್ಲಿನ ಹಕ್ಕಿಗಳ ಕಲರವವಷ್ಟೇ ಮಾತಾಡುತ್ತಿದ್ದ ಗದ್ದೆಯ ಕಾಲುದಾರಿಯಲ್ಲಿ ನಡೆಯುತ್ತಾ ಇಬ್ಬರೂ ಹೊಳೆಬಾಗಿಲು ತಲುಪಿದ್ದರು. ಲಾಂಚು ಬಂದಿತ್ತು. ಅವಳು ಹೊರಟಿದ್ದಳು. ಮುಳುಗಡೆ ನೀರಿಂದ ಹೊರಗಿಣುಕುತ್ತಿರುವ ಒಣಗಿದ ಮರವೊಂದರಂತೆ ಅವನು ದಡದಲ್ಲೇ ನಿಂತಿದ್ದ.

ಅದಾದ ಒಂದು ವಾರಕ್ಕೆ ಹಸಿರುಮಕ್ಕಿ ಲಾಂಚು ನಿಂತು ಹೋಗಿತ್ತು.

* * *

ಮನೋಹರಿ ಮೂವ್ವತ್ತೂರಕ್ಕೆ ಕಾಲಿಟ್ಟ ಮಾರನೇ ದಿನವೇ ಅವಳ ಅಣ್ಣ ಮೈಸೂರಿನ ತನ್ನ ಮನೆಯಲ್ಲಿ ಮೆಟ್ಟಿಲು ತಪ್ಪಿ ಕೆಳಕ್ಕೆ ಕಾಲಿಟ್ಟಿದ್ದ. ಮೇಲಿಂದ ಉರುಳುತ್ತಾ ಬಂದವನ ತಲೆಯನ್ನು ನೆಲ ಘಟ್ಟೆಂಬ ಸದ್ದಿನೊಂದಿಗೆ ಹಿಡಿದುಕೊಂಡಿತ್ತು. ಕೈ, ಕಾಲು ಚಲನೆ ನಿಲ್ಲಿಸಿದ್ದವು. ಮೆದುಳಿನೊಳಗೆ ರಕ್ತ ಚೆಲ್ಲಿದೆ ಎಂದ ಡಾಕ್ಟರು ಆಪರೇಷನ್ ಆಗಲೇಬೇಕು ಎಂದರು. ಮನೋಹರಿಯ ಹೃದಯದೊಳಗೆ ಸಿಡಿಲುಗಳು ಮೆರವಣಿಗೆ ಹೊರಟವು. ಅಪ್ಪ, ಅಮ್ಮ, ಅಣ್ಣ... ಎಲ್ಲವೂ ಆಗಿರುವ ಅಣ್ಣ, ಅವನೀಗ ಯಾವುದೋ ಅಗೋಚರ ಬಿಂದುವಿನಲ್ಲಿ ಕಣ್ಣು ನೆಟ್ಟು ಮಲಗಿಬಿಟ್ಟಿದ್ದಾನೆ. ಅತ್ತಿಗೆ ವಾಸಂತಿಯ ಕಣ್ಣಲ್ಲಿ ಅವಳೂರು ಕೊಡಗಿನ ಕಾವೇರಿಯದೇ ನಿರಂತರ ಪ್ರವಾಹ. ಅಮ್ಮನದು ಮತ್ತದೇ ಅರ್ಥವಾಗದ ಮೌನ, ಕೋಪ. ಇವೆಲ್ಲದರ ನಡುವೆ ಮನೋಹರಿಯೊಬ್ಬಳೇ ಅಕ್ಕನ ಜೊತೆಗೂಡಿ ಅಣ್ಣನ ಬದುಕಿನ ಕಾವಲಿಗೆ ಕುಳಿತುಬಿಟ್ಟಳು. ಅವಳ ಮೂವ್ವತ್ತೂರು ಹಗಲು ಹಾಗೂ ರಾತ್ರಿಗಳನ್ನು ಆಸ್ಪತ್ರೆಯ ಮುಸುಕುಗತ್ತಲಿನ ಕಾರಿಡಾರು ತನ್ನ ಹೆಸರಿಗೆ ಬರೆಸಿಕೊಂಡಿತು. ಈಗ ಕಣ್ತೆರೆದು, ಮತ್ತೆ ಮೂರ್ಛೆ ತಪ್ಪಿ, ಮಗದೊಮ್ಮೆ ಕೈ ಆಡಿಸಿ, ಮತ್ತೊಮ್ಮೆ ಸ್ಥಗಿತವಾಗುತ್ತಿದ್ದವನು ಕೊನೆಗೊಂದು ದಿನ 'ಮನೂ' ಎನ್ನುತ್ತಾ ಇಷ್ಟಗಲಕ್ಕೆ ಕಣ್ತೆರೆದ.

ಕಟುಕನ ಕೈ ಜಾರಿದ ಮರಿಯತ್ತ ಓಡುತ್ತಿರುವ ತಾಯಿ ಮೇಕೆಯಂತೆ ಓಡಿಬಂದಳು ಮನೋಹರಿ. ಇಷ್ಟು ದಿನ ಹೊರಗೆ, ತನಗೆ ಮದುವೆ ಮಾಡಿಲ್ಲ, ಅಮ್ಮನ ನಿರ್ಭಾವುಕ ಶೋಷಣೆಯಿಂದ ರಕ್ಷಿಸಲಿಲ್ಲ ಎಂದೆಲ್ಲ ಜರಿಯುತ್ತಿದ್ದ ಅಣ್ಣನನ್ನು ಒಳಗಿಂದೊಳಗೆ ಅದೆಷ್ಟು ಪ್ರೀತಿಸುತ್ತಿದ್ದೆ ಎನ್ನುವುದು ಮನೋಹರಿಗೆ ಆಗ ಮನವರಿಕೆಯಾಗಿತ್ತು. ಮುಂದೊಂದು ದಿನ ತನ್ನ ನೌಕರಿ, ಸಂಪಾದನೆ, ಅವಲಂಬನೆಗಳೆಲ್ಲದರಿಂದ ಕಳಚಿಕೊಂಡು ಅಣ್ಣನಿಗೆ ಹತ್ತಿರವಾಗಿ, ಮೈಸೂರಿನಲ್ಲೇ ನೆಲೆಸುತ್ತೇನೆ ಎಂದು ನಿರ್ಧರಿಸಿದ ಮೇಲೇ ಮನೋಹರಿ ಬೆಂಗಳೂರಿಗೆ ಮರಳಿದಳು.

* * *

'ಅಂಗ್ಡಿ ಮುಚ್ಚದೇ ಸೈಯ ಅಂತ' ಬಹಳ ಹಿಂದಿನ ಮಾತೆಂಬಂತೆ ನುಡಿದಳು ಅಮ್ಮ.

'ಶೇಖರ ಸೂಪರ್ ಬಜಾರು ಮಾಡ್ತ್ನಡ. ಈಗ್ಲೇ ನಮ್ಮಂಗ್ಡಿಗೆ ಜನಿಲ್ಲೆ. ಇನ್ನೂ ಉಳಿಯಕು ಹೇಳಿರೆ